ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಸೂಕ್ತ ನಿವೇಶನ ಲಭ್ಯವಿರುವುದಿಲ್ಲ.

ಆ) ಹುಕ್ಕೇರಿಯಲ್ಲಿ ನಿವೇಶನ ಹೊರೆಯದಿದ್ದ ಕಾರಣ ಸಂಕೇಶ್ವರದಲ್ಲಿ ಕ್ರೀಡಾಂಗಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

ಶಹಾಬಾದ್ ಪಟ್ಟಣದಲ್ಲಿ ಆಹಾರ ವಿತರಣಾ ಉಪಕಛೇರಿಯ ಪ್ರಾರಂಭ

533 - ಶ್ರೀ ಬಾಬುರಾವ್ ಚವಾಣ್ (ಶಹಾಬಾದ್): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಹಾಬಾದ್ ಪಟ್ಟಣದಲ್ಲಿ ಆಹಾರ ವಿತರಣಾ ಉಪ ಕಛೇರಿ ತೆಗೆಯುವ ಕಾರ್ಯಕ್ರಮ ಸರ್ಕಾರದ ಗಮನದಲ್ಲಿ ಇದೆಯೇ.

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು.

ಇ) ಶಹಾಬಾದ್ ಜನತೆಗೆ ತೊಂದರೆ ಇರುವುದರಿಂದ ಈಗಲಾದರೂ ಆಹಾರ ವಿತರಣಾ ಉಪ ಕಛೇರಿ ತೆರೆಯಲಾಗುವುದೇ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸವದತ್ತಿ ತಾಲ್ಲೂಕು ಪೈಕಿ ಮುರಗೋಡ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಾಣ

508 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕು ಪೈಕಿ ಮುರಗೋಡ್ ಗ್ರಾಮದಲ್ಲಿ ಕೆ.ಎಸ್.ಆರ್.ಟಿ.ಸಿ.ಯವರು ಬಸಸ್ಟ್ಯಾಂಡ್ ಕಟ್ಟುವ ಸಲುವಾಗಿ ಸ್ಥಳವನ್ನು ವಶಪಡಿಸಿಕೊಂಡ ಸಂಗತಿ ನಿಜವೇ;

ಆ) ಬಸಸ್ಟ್ಯಾಂಡ್ ಕಟ್ಟಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು;

ಇ) ಎಷ್ಟು ದಿವಸಗಳಲ್ಲಿ ಬಸಸ್ಟ್ಯಾಂಡ್ನು ಕಟ್ಟುವ ಕೆಲಸವನ್ನು ಪ್ರಾರಂಭ ಮಾಡಲಾಗುವುದು;

ಈ) ಆ ಕೆಲಸಕ್ಕೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಲಾಗಿದೆಯೇ;

ಉ) ನೀಡಿದ್ದಲ್ಲಿ ಯಾವ ದಿನಾಂಕದಂದು ನೀಡಲಾಗಿರುವುದು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಹೌದು.

ಆ) ಬಸ್‌ನಿಲ್ದಾಣದ ನಕ್ಷೆ ಮತ್ತು ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ ಮಂಜೂರಾತಿ ನೀಡಲಾಗಿದೆ.

ಇ) ಬಸ್‌ನಿಲ್ದಾಣ ನಿರ್ಮಾಣ ಕಾರ್ಯಕ್ಕಾಗಿ ಟೆಂಡರುಗಳನ್ನು ಕರೆದು, ಉಳಿದ ಕ್ರಮವನ್ನು ನಿಯಮಾವಳಿ ಅನುಸರಿಸಿ ಗುತ್ತಿಗೆದಾರರನ್ನು ನೇಮಿಸಲು ಸುಮಾರು 3 ತಿಂಗಳ ಕಾಲಾವಕಾಶ ಬೇಕಾಗುತ್ತದೆ. ನಂತರ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು.

ಈ) ನೀಡಲಾಗಿದೆ.